ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/07/ಎಸಿಎಂ(2)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 21-06-2018.

-:: ಸುತ್ತೋಲೆ ::-

**ವಿಷಯ:** 2018-19ನೇ ಸಾಲಿನ ಪ್ರಥಮ ಡಿಪ್ಲೋಮಾ ನಾನ್ ಇಂಜಿನಿಯರಿಂಗ್ ಕೋರ್ಸ್ ಆದ **ಲೈಬ್ರರಿ ಸೈನ್ಸ್ ಪ್ರವೇಶಕ್ಕೆ** ಸಂಬಂಧಿಸಿದಂತೆ ಅರ್ಜಿಗಳ ವಿತರಣೆ ಮತ್ತು ಸ್ವೀಕರಿಸಲು ಅವಧಿ ವಿಸ್ತರಿಸುವ ಬಗ್ಗೆ.

**ಉಲ್ಲೇಖ:** 1. ಈ ಕಛೇರಿ ಸಮ ಸಂಖ್ಯೆ ಪ್ರವೇಶಾಧಿಸೂಚನೆ ದಿನಾಂಕ:08-05-2018.
2. ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ ಇವರ ಪತ್ರ ಸಂ. ಸಮಪಾಹಾ/ಎಸಿಎಂ/1/2018-19/128, ದಿ:12-06-2018.

-00000000-

2018-19ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರಲ್ಲಿ ಈಗಾಗಲೇ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಅರ್ಜಿ ವಿತರಣೆ ಮತ್ತು ಸ್ವೀಕೃತಿ ಬಗ್ಗೆ ಅಧಿಸೂಚನೆಯನ್ನು ನೀಡಲಾಗಿತ್ತು ಈ ಸಂಬಂಧದಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸುವ ಅಂತಿಮ ದಿನಾಂಕವನ್ನು 28-05-2018 ಎಂದು ನಿಗಧಿಪಡಿಸಿ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಯನ್ನು ಆಫ್-ಲೈನ್ ಮುಖಾಂತರ ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ **ದಿ:31-05-2018** ರೊಳಗೆ ಪೂರ್ಣಗೊಳಿಸಲು ತಿಳಿಸಲಾಗಿರುತ್ತದೆ.

ಉಲ್ಲೇಖ(2)ರ ಪ್ರಿನ್ಸಿಪಾಲರು ತಮ್ಮ ಸಂಸ್ಥೆಯಲ್ಲಿನ ಲೈಬ್ರರಿ ಸೈನ್ಸ್ ಪ್ರವೇಶಕ್ಕೆ ಸಂಬಂಧಿಸಿದಂತೆ ಅತೀ ಕಡಿಮೆ ಅರ್ಜಿಗಳು ಸ್ವೀಕೃತವಾಗಿರುವುದು, ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸಲು ಅಂತಿಮ ದಿನಾಂಕವನ್ನು ವಿಸ್ತರಿಸಬೇಕೆಂದು ಕೋರಿರುತ್ತಾರೆ. ಈ ಸಂಬಂಧದಲ್ಲಿ ಪ್ರಿನ್ಸಿಪಾಲರ ಮನವಿಯನ್ನು ಪರಿಗಣಿಸಿ ವಿದ್ಯಾರ್ಥಿನಿಯರ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ಲೈಬ್ರರಿ ಸೈನ್ಸ್ ಕೋರ್ಸಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸಲು ಈ ಕೆಳಕಂಡಂತೆ ಅನುಮತಿ ನೀಡಲಾಗಿದೆ.

1. **ಅರ್ಜಿ ಪಡೆಯಲು ವಿಸ್ತರಿಸಲಾದ ದಿ30-06-2018ರ ಸಂಜೆ 5:30 ಗಂಟೆಯವರೆಗೆ**
2. **ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ದಿ:30-06-2018ರ ಸಂಜೆ 5:30 ಗಂಟೆಯೊಳಗೆ**

ಮೇಲೆ ನಮೂದಿಸಿರುವಂತೆ ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೀಡಿ, ನಿಯಮಗಳ ಪ್ರಕಾರ **ದಿ:30-06-2018 ರೊಳಗೆ** ಪ್ರವೇಶ ಪ್ರಕ್ರಿಯೆಯನ್ನು ಪ್ರಿನ್ಸಿಪಾಲರು ತಮ್ಮ ಹಂತದಲ್ಲಿಯೇ ಪೂರ್ಣಗೊಳಿಸಲು ತಿಳಿಸಲಾಗಿದೆ.

ನಿರ್ದೇಶಕರು

21/06

**ಇವರಿಗೆ,**

1. ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು
2. ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು
3. ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ

**ಮೇಲ್ಕಂಡ ಪರಿಷ್ಕೃತ ಪ್ರವೇಶ ವೇಳಾ ಪಟ್ಟಿಯು ಕೇವಲ ಲೈಬ್ರರಿ ಸೈನ್ಸ್ ಕೋರ್ಸಿಗೆ ಮಾತ್ರ ಅನ್ವಯವಾಗುವಂತೆ ಕ್ರಮತೆಗೆದುಕೊಳ್ಳುವುದು**

<u>ಪ್ರತಿ ಮಾಹಿತಿಗಾಗಿ:–</u>

1) ಜಂಟಿ ನಿರ್ದೇಶಕರು(ಆಡಳಿತ), ತಾಂ.ಶಿ.ನಿ, ಬೆಂಗಳೂರು.
2) ಕಾರ್ಯದರ್ಶಿಗಳು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
3) ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ,
4) ನಿರ್ದೇಶಕರ ಆಪ್ತಶಾಖೆಗೆ,
5) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂ.ಶಿ.ನಿ, ಬೆಂಗಳೂರು,
6) ಎಸ್‌ಟಿಎಲ್, ಡಿವಿಪಿ(1) ಮತ್ತು ಡಿವಿಪಿ(2).
7) ಇಆರ್‌ಎಸ್ ವಿಭಾಗಕ್ಕೆ – ಮೇಲ್ಕಂಡ ಅವಧಿಯಲ್ಲಿ ಕರ್ನಾಟಕೇತರ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ನೀಡುವ ಬಗ್ಗೆ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.
8) ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ಸದರಿ ಪ್ರವೇಶಾಧಿಸೂಚನೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.